ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ        ದಿನಾಂಕ : DATE :

## 'ಪೆದ್ದ' ಎಂದಿದ್ದಕ್ಕೆ ಸಿದ್ದರಾಮಯ್ಯ 'ಕಾರು'ಬಾರಿಗೆ ತಡೆ ನೀಡಿದ್ದ ಸ್ಪೀಕರ್

# ಸಿದ್ದುಗೆ ಕೊನೆಗೂ ಸಿಕ್ತು ಗೂಟದ ಕಾರು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ವರ್ಷ ಕಳೆದಿದ್ದು, ಸಿದ್ದರಾಮಯ್ಯ ಅವರು ಅಧಿಕೃತವಾಗಿ ಪ್ರತಿಪಕ್ಷ ನಾಯಕರಾಗಿ ಹಲವು ತಿಂಗಳು ಕಳೆದಿವೆ. ಆದರೂ ಈವರೆಗೆ ಸರಕಾರದಿಂದ ವಾಹನವನ್ನು ನೀಡಿರಲಿಲ್ಲ. ಆದರೆ ಹಲವು ಹಂತದ ಮಾತುಕತೆಯ ಬಳಿಕ ಕೊನೆಗೂ ಸಿದ್ದರಾಮಯ್ಯ ಅವರಿಗೆ ಸರಕಾರದಿಂದ ವಾಹನ ಸಿಕ್ಕಿದೆ.



ಸಿದ್ದರಾಮಯ್ಯ ಅವರು ವಿಧಾನ ಸಭೆಯ ಪ್ರತಿಪಕ್ಷ ನಾಯಕರಾಗಿ ಅಧಿಕೃತವಾಗಿ ಆಯ್ಕೆಯಾಗಿ ಆರೇಳು ತಿಂಗಳು ಕಳೆಯುತ್ತಾ ಬಂದಿದೆ. ಆದರೆ ಪ್ರತಿಪಕ್ಷ ನಾಯ ಕರಿಗೆ ಸರಕಾರದಿಂದ ನೀಡಬೇಕಿರುವ ಯಾವುದೇ ಸೌಲಭ್ಯವನ್ನು ಸ್ಪೀಕರ್ ಕಚೇರಿಯಿಂದ ನೀಡಿರಲಿಲ್ಲ. ಈ ಬಗ್ಗೆ ಹಲವು ಬಾರಿ ಪತ್ರ ಬರೆದಿದ್ದರೂ, ಸ್ಪಷ್ಟ ಉತ್ತರ ಸಿಕ್ಕಿರಲಿಲ್ಲ. ಆದರೆ ಇದೀಗ ಮುಂಗಾರು ಅಧಿವೇಶನಕ್ಕೂ ಮೊದಲು ಟೊಯೋಟಾ ಫಾರ್ಚೂನರ್‌ನ ಸಿಗ್ಮಾ 4 ಕಾರನ್ನು ನೀಡಲಾಗಿದೆ. ಕೇವಲ ಕಾರು ಮಾತ್ರವಲ್ಲದೇ, ಸರಕಾರಿ ಬಂಗಲೆ, ಅಧಿಕಾರಿಗಳನ್ನು ನೀಡಿರಲಿಲ್ಲ. ಮುಖ್ಯಮಂತ್ರಿಗಳಿಗೆ ಕಾವೇರಿ ಮನೆ ಬಿಟ್ಟುಕೊಡಬೇಕು ಎಂದಾಗ ಸಿದ್ದರಾಮಯ್ಯ ಅವರಿಗೆ ಮತ್ತೊಂದು ನಿವಾಸವನ್ನು ನೀಡಲಾಗಿತ್ತು.

### ಸಿಎಂ ಮಧ್ಯಪ್ರವೇಶದ ನಂತರ ಕಾರ್

**ಸಿದ್ದರಾಮಯ್ಯ ಅವರಿಗೆ ಸರಕಾರದಿಂದ ನೀಡಬೇಕಿರುವ ಅಗತ್ಯ ಸೌಲಭ್ಯ ಕೊಡುವ ಬಗ್ಗೆ ಸ್ಪೀಕರ್ ಕಾಗೇರಿ ಅವರು ಒಪ್ಪಿರಲಿಲ್ಲ. ಈ ಹಂತದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಇತರ ಹಿರಿಯ ಶಾಸಕರು ಮಧ್ಯಪ್ರವೇಶ ಮಾಡಿದ್ದಾರೆ. ಈ ರೀತಿ ಸೌಲಭ್ಯವನ್ನು ನೀಡದಿದ್ದರೆ, ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ. ಸರಕಾರಕ್ಕೆ ಹಾಗೂ ಪಕ್ಷಕ್ಕೆ ಕೆಟ್ಟ ಹೆಸರು ಬರಲಿದೆ. ಆದ್ದರಿಂದ ಕಾರು, ಅಧಿಕಾರಿಗಳು ಸೇರಿದಂತೆ ಅಗತ್ಯ ಸೌಲಭ್ಯ ನೀಡುವಂತೆ ಮನವೊಲಿಸಿದ್ದಾರೆ. ಸಂಧಾನ ಸಭೆಗಳ ಬಳಿಕವೇ ಈ ಕಾರನ್ನು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.**

- **ಅಧಿವೇಶನದಲ್ಲಿ ಮಾತನಾಡಲು ಅವಕಾಶ ನೀಡದಿದ್ದಕ್ಕೆ ಸ್ಪೀಕರ್‌ಗೆ ಪೆದ್ದ ಎಂದ ಸಿದ್ದು**
- **ಅಸಂವಿಧಾನಿಕ ಪದ ಪ್ರಯೋಗಿಸಿದ್ದಕ್ಕೆ ಸರಕಾರಿ ಸೌಲಭ್ಯ ತಡೆ ಹಿಡಿದಿದ್ದ ಸ್ಪೀಕರ್**
- **ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ ಎಂಬ ಆತಂಕದಿಂದ ಸಿಎಂ ಮಧ್ಯಪ್ರವೇಶ**
- **ಸಂಧಾನದ ಬಳಿಕ ಕೋಪ ತಣಿಸಿಕೊಂಡು, ಸೌಲಭ್ಯ ಕಲ್ಪಿಸಿದ ಕಾಗೇರಿ**



**ವಿಳಂಬವಾಗಲು ಕಾರಣವೇನು?:** ಸಿದ್ದರಾಮಯ್ಯ ಹಾಗೂ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ನಡುವಿನ ಈ ಶೀತಲ ಸಮರಕ್ಕೆ ಮುಖ್ಯವಾಗಿ, ಸಿದ್ದರಾಮಯ್ಯ ಅವರು ಕಾಗೇರಿ ಅವರ ವಿರುದ್ಧ ಬಳಸಿದ 'ಪೆದ್ದ' ಎನ್ನುವ ಪದ ಕಾರಣವೆಂದು ಹೇಳಲಾಗಿದೆ. ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ನಡೆದ ಮೊದಲ ಅಧಿವೇಶನದಲ್ಲಿ ಸಿದ್ದರಾಮಯ್ಯ ಅವರಿಗೆ ಮಾತನಾಡಲು ಅವಕಾಶ ನೀಡದೇ, ವಿಧಾನಸಭೆಯ ಕಲಾಪವನ್ನು ಮುಂದೂಡಿದ್ದರು. ಈ ವೇಳೆ ಸ್ಪೀಕರ್ ವಿರುದ್ಧ ಅಸಮಾಧಾನಗೊಂಡ ಸಿದ್ದರಾಮಯ್ಯ 'ಪೆದ್ದ' ಎನ್ನುವ ಪದವನ್ನು ಪ್ರಯೋಗಿಸಿದ್ದರು. ಆದರೆ ಅಧಿವೇಶನವನ್ನು ಆದಾಗಲೇ ಮುಂದೂಡಿದ್ದರಿಂದ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗಿರಲಿಲ್ಲ. ಆದರೆ ಅವರಿಗೆ ನೀಡಬೇಕಿದ್ದ ಸೌಲಭ್ಯವನ್ನು ಮೌಖಿಕ ಆದೇಶದ ಮೂಲಕ ತಡೆ ಹಿಡಿಯಲಾಗಿತ್ತು ಎಂದು ಹೇಳಲಾಗಿದೆ. ಇದಾದ ಬಳಿಕ ಹಲವು ಬಾರಿ ಸಿದ್ದರಾಮಯ್ಯ ಅವರು ಸ್ಪೀಕರ್ ಅವರಿಗೆ ಪತ್ರ ಬರೆದು ಸಾಂವಿಧಾನಿಕವಾಗಿ ಸಿಗಬೇಕಾದ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿದ್ದರು. ಅಂತಿಮವಾಗಿ ಇದೀಗ ಮುಂಗಾರು ಅಧಿವೇಶನಕ್ಕೂ ಮೊದಲು ಕಾರನ್ನು ನೀಡುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದಾರೆ.